# ತುಮಕೂರು ವಿಶ್ವವಿದ್ಯಾನಿಲಯ

**ಪರೀಕ್ಷಾ ಭವನ , ಬಿ. ಹೆಚ್. ರಸ್ತೆ , ತುಮಕೂರು-572 103 ☎:0816-2255650,2273511 ಫ್ಯಾಕ್ಸ್:0816-2270719**

ಸಂಖ್ಯೆ:ತುವಿ:ಪವಿ:2025–26: 125 ದಿನಾಂಕ:17.05.2025

**ಗೆ,**

ಡಾ. ಡಿ. ಬಿ. ಅರುಣ ಕುಮಾರ್
ಸದಸ್ಯರು
ಸ್ನಾತಕ ರಸಾಯನಶಾಸ್ತ್ರ ಪರೀಕ್ಷಾ ಮಂಡಳಿ
ಹಾಗೂ ಸಹ ಪ್ರಾಧ್ಯಾಪಕರು
ರಸಾಯನಶಾಸ್ತ್ರ ವಿಭಾಗ
ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು
ತುಮಕೂರು.

**ವಿಷಯ** : 2025 ರ ಜುಲೈ/ಆಗಸ್ಟ್ ಮಾಹೆಗಳಲ್ಲಿ ನಡೆಯಲಿರುವ ವಿವಿಧ ಸ್ನಾತಕ ಪದವಿ ಪರೀಕ್ಷೆಗಳಿಗೆ ಪ್ರಶ್ನೆಪತ್ರಿಕೆಗಳ ಹಸ್ತಪ್ರತಿಗಳನ್ನು ಸಿದ್ಧಪಡಿಸುವುದಕ್ಕೆ ಸಂಬಂಧಿಸಿದ್ದರ ಕುರಿತು.

**ಉಲ್ಲೇಖ** : 1. ಈ ಕಚೇರಿ ಅಧಿಸೂಚನೆ ಸಂಖ್ಯೆ:ತುವಿ:ಪವಿ:2024–25/858 ದಿನಾಂಕ:26.12.2024
2. ಈ ಕಚೇರಿ ಸುತ್ತೋಲೆ ಸಂಖ್ಯೆ:ತುವಿ:ಪವಿ:2025–26/73 ದಿನಾಂಕ:24.04.2025
3. ತಮ್ಮ ಪತ್ರದ ದಿನಾಂಕ:07.05.2025

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಡಾ. ಡಿ. ಬಿ. ಅರುಣ ಕುಮಾರ್, ಸಹ ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ಆದ ತಮ್ಮನ್ನು ಉಲ್ಲೇಖ (1) ರ ಈ ಕಚೇರಿ ಅಧಿಸೂಚನೆಯನ್ವಯ 2024–25 ನೇ ಸಾಲಿನ ಸ್ನಾತಕ ಪದವಿಯ ರಸಾಯನಶಾಸ್ತ್ರ ವಿಷಯದ ಪರೀಕ್ಷಾ ಮಂಡಳಿಯ ಸದಸ್ಯರನ್ನಾಗಿ ನೇಮಿಸಲಾಗಿರುತ್ತದೆ.

ವಿಶ್ವವಿದ್ಯಾನಿಲಯವು ಉಲ್ಲೇಖ (2) ರ ಈ ಕಚೇರಿ ಸುತ್ತೋಲೆಯಲ್ಲಿ ವಿವಿಧ ವಿಷಯಗಳ ಎಲ್ಲಾ ಪರೀಕ್ಷಾ ಮಂಡಳಿಗಳ ಅಧ್ಯಕ್ಷರುಗಳಿಗೆ ಪರೀಕ್ಷಾ ಮಂಡಳಿಯ ಸಭೆಯನ್ನು ಕರೆದು ವಿವಿಧ ಸ್ನಾತಕ ಪದವಿಯ ಎರಡು, ನಾಲ್ಕು ಮತ್ತು ಆರನೇ ಸೆಮಿಸ್ಟರ್‌ನ ಪ್ರಶ್ನೆಪತ್ರಿಕೆಯ ಹಸ್ತಪ್ರತಿಗಳನ್ನು ಸಿದ್ಧಪಡಿಸಿಕೊಡುವಂತೆ ಸೂಚಿಸಲಾಗಿರುತ್ತದೆ.

ಪ್ರಸ್ತುತ ತಾವುಗಳು ವಿಶ್ವವಿದ್ಯಾನಿಲಯಕ್ಕೆ ಉಲ್ಲೇಖ (3) ರ ಪತ್ರ ಸಲ್ಲಿಸಿ ನನ್ನ ಸಂಬಂಧಿಕರ ಮಗನಾದ ಲಿಖಿತ್ ಎಸ್. ಇವರು 2023–24 ನೇ ಶೈಕ್ಷಣಿಕ ಸಾಲಿನ ಆರನೇ ಸೆಮಿಸ್ಟರ್‌ನ ರಸಾಯನಶಾಸ್ತ್ರ ವಿಷಯದಲ್ಲಿ ಅನುತ್ತೀರ್ಣನಾದ ಕಾರಣ ಸದರಿ ವಿಷಯದ ಪರೀಕ್ಷೆಯನ್ನು ಆ ವಿದ್ಯಾರ್ಥಿಯು ಮತ್ತೊಮ್ಮೆ ತೆಗೆದುಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಪರೀಕ್ಷಾ ಗೌಪ್ಯತಾ ದೃಷ್ಠಿಯಿಂದ ವಿನಾಯಿತಿ ನೀಡುವಂತೆ ಕೋರಿರುತ್ತೀರಿ.

ತತ್ಸಂಬಂಧ ತಮ್ಮ ಪತ್ರವನ್ನು ಪರಿಶೀಲಿಸಲಾಗಿದ್ದು ಪರೀಕ್ಷಾ ಗೌಪ್ಯತಾ ದೃಷ್ಠಿಯಿಂದ ತಾವುಗಳು 2024–25 ನೇ ಶೈಕ್ಷಣಿಕ ಸಾಲಿನ 2025 ರ ಜುಲೈ/ಆಗಸ್ಟ್ ಮಾಹೆಗಳಲ್ಲಿ ನಡೆಯಲಿರುವ ವಿವಿಧ ಸ್ನಾತಕ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಯಾವುದೇ ರೀತಿಯ ಪರೀಕ್ಷಾ ಕಾರ್ಯಗಳಲ್ಲಿ ಪಾಲ್ಗೊಳ್ಳಬಾರದೆಂಬುದಾಗಿ ಈ ಮೂಲಕ ತಮಗೆ ಸೂಚಿಸಲಾಗಿದೆ.

19/5/25

**ಕುಲಸಚಿವರು(ಮೌಲ್ಯಮಾಪನ)**

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು. (ಪು.ತಿ.ನೋ.)

**ಪ್ರತಿಗಳು :**

1. ಪ್ರಾಂಶುಪಾಲರುಗಳು, ಘಟಕ/ಎಲ್ಲಾ ಸಂಯೋಜಿತ ಸ್ನಾತಕ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಅಧ್ಯಕ್ಷರು, 2024-25 ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಯ ರಸಾಯನಶಾಸ್ತ್ರ ವಿಷಯದ ಪರೀಕ್ಷಾ ಮಂಡಳಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. – **ಅಗತ್ಯ ಕ್ರಮಕ್ಕಾಗಿ.**
3. ಎಲ್ಲಾ ಸದಸ್ಯರುಗಳು, 2024-25 ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಯ ರಸಾಯನಶಾಸ್ತ್ರ ವಿಷಯದ ಪರೀಕ್ಷಾ ಮಂಡಳಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಮುಖ್ಯಸ್ಥರು, ಸ್ನಾತಕ ರಸಾಯನಶಾಸ್ತ್ರ ವಿಭಾಗ, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು.
5. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. – **ಇಂದೇ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸುವುದು.**
6. ಕಚೇರಿ ಪ್ರತಿ.